# ಕರ್ನಾಟಕ ಲೋಕಾಯುಕ್ತ

**ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-510/2014/ಡಿಆರ್‌ಇ-1**

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 3/2/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀಮತಿ.ಕುಸುಮಾಬಾಯಿ, ಅಧ್ಯಕ್ಷರು, ಚಿನ್ನಿಕಟ್ಟೆ ಗ್ರಾಮ ಪಂಚಾಯಿತಿ, (2) ಶ್ರೀ.ಹಳದಪ್ಪ, ಹಿಂದಿನ ಕಾರ್ಯದರ್ಶಿ, ಚಿನ್ನಿಕಟ್ಟೆ ಗ್ರಾಮಪಂಚಾಯಿತಿ, (ಹಾಲಿ ನಿವೃತ್ತ), ಮತ್ತು (3) ಶ್ರೀಮತಿ.ರಜನಿ ಎಂ, ಕಂಪ್ಯೂಟರ್ ಆಪರೇಟರ್, ಚಿನ್ನಿಕಟ್ಟೆ ಗ್ರಾಮಪಂಚಾಯಿತಿ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ, ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1. ಶ್ರೀ.ಸುಬ್ರಮಣ್ಯ ಎ ಬಿನ್ ಅಣ್ಣಾಮಲೈ ವಿ, ಚಿನ್ನಿಕಟ್ಟೆ ಅಂಚೆ, ಹೊನ್ನಾಳಿ ತಾಲ್ಲೂಕು, ದಾವಣಗರೆ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀಮತಿ.ಕುಸುಮಾಬಾಯಿ, ಅಧ್ಯಕ್ಷರು, ಚಿನ್ನಿಕಟ್ಟೆ ಗ್ರಾಮ ಪಂಚಾಯಿತಿ, (2) ಶ್ರೀ.ಹಳದಪ್ಪ, ಹಿಂದಿನ ಕಾರ್ಯದರ್ಶಿ, ಚಿನ್ನಿಕಟ್ಟೆ ಗ್ರಾಮಪಂಚಾಯಿತಿ, (ಹಾಲಿ ನಿವೃತ್ತ), ಮತ್ತು (3) ಶ್ರೀಮತಿ.ರಜನಿ ಎಂ, ಕಂಪ್ಯೂಟರ್ ಆಪರೇಟರ್, ಚಿನ್ನಿಕಟ್ಟೆ ಗ್ರಾಮಪಂಚಾಯಿತಿ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರು ತಮ್ಮ ದೂರಿನಲ್ಲಿ ಚಿನ್ನಿಕಟ್ಟೆ ಗ್ರಾಮಪಂಚಾಯಿತಿ ಅಧ್ಯಕ್ಷರು ಮತ್ತು ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮಪಂಚಾಯಿತಿಯ 13ನೇ ಹಣಕಾಸು ಮತ್ತು ಎನ್.ಆರ್.ಇ.ಜಿ. ಯೋಜನೆಯ ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ ಎಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3. ದೂರುದಾರರ ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. 1 ಮತ್ತು 2ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ 2012-13ನೇ ಸಾಲಿನ ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಲ್ಲಿ ಬಿದರಹಳ್ಳಿ ಗ್ರಾಮದ ಶೇಖರಪ್ಪನ ಗದ್ದೆಯಿಂದ ಹೂತಪ್ಪನ ಕೆರೆಯವರೆಗೆ ಬಸಿ ಕಾಲುವೆ ಕಾಮಗಾರಿಯ ವಿಚಾರವಾಗಿ ಯಾವುದೇ ಕಳಪೆ ಕಾಮಗಾರಿಯಾಗಿರುವುದಿಲ್ಲ. ಸದರಿ ಕಾಮಗಾರಿಯನ್ನು ಕೂಲಿಗಾರರೇ ಮಾಡಿದ್ದು, ಸದರಿಯವರಿಗೆ ಬ್ಯಾಂಕ್ ಮುಖಾಂತರ ಹಣ ಖಾತೆಗಳಿಗೆ ಜಮೆಯಾಗಿರುತ್ತದೆ. ಕಾಮಗಾರಿಯ ವಿಚಾರವಾಗಿ ಮಧ್ಯವರ್ತಿಗಳಿಗೆ ಹಣ ಪಾವತಿಯಾಗಿರುವುದಿಲ್ಲ. 2012-13ನೇ

ಸಾಲಿನ 13ನೇ ಹಣಕಾಸು ಯೋಜನೆಯಲ್ಲಿ ಕಾಮಗಾರಿಗಳು ಸುವ್ಯವಸ್ಥಿತವಾಗಿದ್ದು ಕಳಪೆಯಾಗಿರುವುದಿಲ್ಲ. ಕಾಮಗಾರಿ ಹಣವನ್ನು ಸಂಬಂಧಪಟ್ಟ ಗುತ್ತಿಗೆದಾರರಿಗೆ ಜಮಾ ಮಾಡಲಾಗಿರುತ್ತದೆಯೆಂದು ಹೇಳಿರುತ್ತಾರೆ.

4. 3ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಅವರು ಚಿನ್ನಿಕಟ್ಟೆ ಗ್ರಾಮ ಪಂಚಾಯಿತಿಯಲ್ಲಿ ಕಂಪ್ಯೂಟರ್ ಆಪರೇಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು, ದೂರಿನ ವಿಚಾರದಲ್ಲಿ ಅವರು ಭಾಗಿಯಾಗಿರುವುದಿಲ್ಲ. ಕೂಲಿ ಕಾರ್ಮಿಕರು ಕಾಮಗಾರಿಗಾಗಿ ಫಾರಂ ನಂ.6 ರಲ್ಲಿ ಅರ್ಜಿ ಸಲ್ಲಿಸಿದ್ದು, ಪಿ.ಡಿ.ಓ ಮತ್ತು ಅಧ್ಯಕ್ಷರ ಆದೇಶದ ಮೇರೆಗೆ ಎಂ.ಐ.ಎಸ್. ನಲ್ಲಿ ದಾಖಲಿಸಿರುವುದನ್ನು ಬಿಟ್ಟರೆ ಬೇರೆ ಯಾವುದೇ ತಪ್ಪನ್ನು ಮಾಡಿರುವುದಿಲ್ಲವೆಂದು ಹೇಳಿರುತ್ತಾರೆ.

5. ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ಎದುರುದಾರರು ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ತಮ್ಮ ಅನುಕೂಲಕ್ಕೆ ತಕ್ಕಂತೆ ದಾಖಲೆಗಳನ್ನು ತಿರುಚಿಕೊಂಡು ಮೂಲ ಕೆಲಸ ನಿರ್ವಹಿಸಿದ ಕಾಂಟ್ರಾಕ್ಟ್‌ದಾರರಿಗೆ ಹಣ ನೀಡದೆ ವಂಚಿಸಿರುತ್ತಾರೆ. ಎನ್.ಆರ್.ಇ.ಜಿ. ಕಾಮಗಾರಿಯಲ್ಲಿ ಕಾಮಗಾರಿ ನಿರ್ವಹಿಸಿದ ಕಾರ್ಮಿಕರಿಗೆ ಹಣ ನೀಡದೆ ತಮ್ಮ ಹತ್ತಿರದ ಸಂಬಂಧಿಗಳು ಮತ್ತು ಬೆಂಬಲದಾರರ ಹೆಸರಿಗೆ ದಾಖಲೆಗಳನ್ನು ತಿರುಚಿಕೊಂಡು ಅವರ ಹೆಸರಿನಲ್ಲಿ ಹಣ ಜಮಾ ಮಾಡಿ ನಂತರ ಹಣವನ್ನು ಹಂಚಿಕೊಂಡಿರುತ್ತಾರೆ. 2015 ರ ಜನವರಿಯಿಂದ ಈಚೆಗೆ 13ನೇ ಹಣಕಾಸು ಯೋಜನೆಯಡಿಯಲ್ಲಿ ಕೆಲಸ ನಿರ್ವಹಿಸಿದ ಕಾಂಟ್ರಾಕ್ಟ್‌ದಾರರಾದ ಕುಮಾರಸ್ವಾಮಿಯವರಿಗೆ ಕಾರ್ಯದರ್ಶಿಯವರು ಇನ್ನೂ ಹಣ ಪಾವತಿ ಮಾಡಬೇಕಾಗಿದೆ. ಬಿದರಹಳ್ಳಿ ವಾರ್ಡ್‌ನ ಶೇಖರಪ್ಪನ ಗದ್ದೆಯಿಂದ ಭೂತಪ್ಪನ ಕೆರೆವರೆಗೆ ಮಾಡಿದ ಬಸಿ ಕಾಲುವೆ ಕಾಮಗಾರಿಗೆ ಕಾರ್ಮಿಕರಿಗೆ ಹಣ ಸಂದಾಯವಾಗಿರುವುದಿಲ್ಲ. ಎದುರುದಾರರು ಹಾಜರು ಪಡಿಸಿದ ಎಫ್.ಡಿ.ಓ. ಕಾಪಿ ನಕಲಿಯಾಗಿರುತ್ತದೆ. ಗ್ರಾಮಪಂಚಾಯಿತಿ ಅಧ್ಯಕ್ಷೆ ಮತ್ತು ಅವರ ಗಂಡನ ವಿರುದ್ಧ ಹೊನ್ನಾಳಿ ನ್ಯಾಯಾಲಯದಲ್ಲಿ ಕ್ರಿಮಿನಲ್ ಕೇಸ್ ದಾಖಲಾಗಿರುತ್ತದೆ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

6. ದೂರುದಾರರ ದೂರು ಹಾಗೂ ಪ್ರತ್ಯುತ್ತರವನ್ನು ಪರಿಶೀಲಿಸಿದಾಗ, ಎನ್.ಆರ್.ಇ.ಜಿ. ಯೋಜನೆಯಲ್ಲಿ ಕಾರ್ಮಿಕರಿಗೆ ಮತ್ತು ಗುತ್ತಿಗೆದಾರರಿಗೆ ಎದುರುದಾರರು ಹಣವನ್ನು ಪಾವತಿಸದೆ ದಾಖಲೆಗಳನ್ನು ಸೃಷ್ಟಿಸಿಕೊಂಡು ಅವರೇ ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆಂದು ಹೇಳಿರುತ್ತಾರೆ. ಎದುರುದಾರರು ತಮ್ಮ ಆಕ್ಷೇಪಣೆಯ ಜೊತೆ ಕಾಮಗಾರಿ ನಿರ್ವಹಿಸಿದ ಬಗ್ಗೆ ಸೂಕ್ತವಾದ ದಾಖಲಾತಿಗಳನ್ನು ಹಾಗೂ ಹಣ ಪಾವತಿ ಮಾಡಿದ ಬಗ್ಗೆ ಎಲ್ಲಾ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ದಿ.29/5/2014 ರಂದು ಗೌರವಾನ್ವಿತ ಉಪಲೋಕಾಯುಕ್ತರು ದಾವಣಗೆರೆ ಪ್ರವಾಸದ ಸಂದರ್ಭದಲ್ಲಿ ಮೂಲ ಕಡತ ಕಾಣೆಯಾಗಿರುತ್ತದೆಯೆಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ತಿಳಿಸಿರುವುದು ಕಂಡುಬಂದ ಕಾರಣ ದೂರುದಾರರ ದೂರಿನ ಬಗ್ಗೆ ತನಿಖೆಯನ್ನು ನಡೆಸಿ

ವರದಿಯನ್ನು ಸಲ್ಲಿಸುವಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ದಾವಣಗೆರೆ ಇವರಿಗೆ ಆದೇಶಿಸಲಾಗಿತ್ತು.

7. ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ದಾವಣಗೆರೆ ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಈ ಕೆಳಗಿನಂತೆ ಅಭಿಪ್ರಾಯವನ್ನು ನೀಡಿರುವುದು ಕಂಡುಬರುತ್ತದೆ.

"1 ಮತ್ತು 2ನೇ ಆಪಾದನೆಗಳಿಗೆ ಸಂಬಂಧಿಸಿದಂತೆ ವಿಚಾರಣಾಧಿಕಾರಿಯವರು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳು, ಹೊನ್ನಾಳಿರವರಿಂದ ದಾಖಲಾತಿಗಳನ್ನು ಪಡೆದು ಪರಿಶೀಲಿಸಿರುವುದು ಹಾಗೂ ದಿ.2/3/17 ರಂದು ಖುದ್ದು ಚಿನ್ನಿಕಟ್ಟೆ ಗ್ರಾಮಕ್ಕೆ ಭೇಟಿ ನೀಡಿ ಪಿ.ಡಿ.ಓ. ವಿಜಯಕುಮಾರ, ಸದರಿ ಕಾಮಗಾರಿಗಳನ್ನು ನಿರ್ವಹಿಸಿದ ಗುತ್ತಿಗೆದಾರರಾದ ಶ್ರೀ.ಕುಮಾರಸ್ವಾಮಿ ಹಾಗೂ ಸ್ಥಳೀಯರೊಂದಿಗೆ ಮೇಲ್ಕಂಡ ಕಾಮಗಾರಿಗಳನ್ನು ನಿರ್ವಹಿಸಿದ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಲಾಗಿದ್ದು, ಬಿದರಹಳ್ಳಿ ಗ್ರಾಮದ ಕುಬೇರನಾಯ್ಕ ಮನೆಯಿಂದ ಶಂಕ್ರನಾಯ್ಕನ ಮನೆಯ ಹಿತ್ತಲಿನವರೆಗೆ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿ 2012-13ನೇ ಸಾಲಿನಲ್ಲಿ ತುಂಡು ಗುತ್ತಿಗೆ ಮೇಲೆ ಕಾಮಗಾರಿ ನಿರ್ವಹಿಸಲು ರೂ.28,000/- ಗಳಿಗೆ ಕ್ರಿಯಾ ಯೋಜನೆ ಆದೇಶವಾಗಿದ್ದು, ನಂತರ 2014 ರಲ್ಲಿ ನಿಯಮಾನುಸಾರ ಇ.ಓ, ಹೊನ್ನಾಳಿ ರವರ ಸೂಚನೆಯಂತೆ ಗ್ರಾಮ ಪಂಚಾಯಿತಿಯಲ್ಲಿ ಸದರಿ ಕಾಮಗಾರಿಯನ್ನು ನಿರ್ವಹಿಸಿದ್ದವರಿಗೆ ಹಣ ಪಾವತಿಸಬಹುದೆಂದು ಠರಾವು ಮಾಡಿಕೊಂಡು ಕಾಮಗಾರಿ ನಿರ್ವಹಿಸಿದ್ದ ಶ್ರೀ.ಕುಮಾರಸ್ವಾಮಿ, ಗುತ್ತಿಗೆದಾರರು ಇವರಿಗೆ ಚೆಕ್ ಮೂಲಕ ರೂ.26,179/- ಗಳನ್ನು ಪಾವತಿಸಿರುವುದು ದಾಖಲಾತಿ ಹಾಗೂ ಕುಮಾರಸ್ವಾಮಿರವರ ಹೇಳಿಕೆಯಿಂದ ಕಂಡುಬಂದಿರುತ್ತದೆ. ಅಲ್ಲದೆ ಚಿನ್ನಿಕಟ್ಟೆ ತಮಿಳುಕೇರಿಯಲ್ಲಿ ಪರ್ವತಪ್ಪ ಮನೆಯಿಂದ ಅಂಗನವಾಡಿವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಸಹ ತುಂಡು ಗುತ್ತಿಗೆ ಮೇಲೆ ನಿರ್ವಹಿಸಲು ಗುತ್ತಿಗೆದಾರರಾದ ಶ್ರೀ.ಕುಮಾರಸ್ವಾಮಿ ಇವರಿಗೆ ಪಂಚಾಯಿತಿಯಿಂದ ವಹಿಸಿದ್ದು, ಅದರಂತೆ ಸದರಿಯವರು 2012-13ನೇ ಸಾಲಿನಲ್ಲಿ ಸದರಿ ಕಾಮಗಾರಿಯನ್ನು ಸಹ ನಿರ್ವಹಿಸಿರುವುದು ಸ್ಥಳ, ದಾಖಲಾತಿ ಹಾಗೂ ಕುಮಾರಸ್ವಾಮಿ ರವರ ಹೇಳಿಕೆಯಿಂದ ಕಂಡುಬಂದಿದ್ದು, ಅದರಂತೆ ಸದರಿ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರೂ.18,500/- ಮೊತ್ತದಲ್ಲಿ ನಿರ್ವಹಿಸಲು ಪಂಚಾಯಿತಿಯವರು ಕ್ರಿಯಾಯೋಜನೆ ತಯಾರಿಸಿದ್ದು, ಕಾಮಗಾರಿ ಮುಕ್ತಾಯವಾದ ನಂತರ ತುಂಡು ಗುತ್ತಿಗೆ ಕರಾರು ಮೊತ್ತ ರೂ.18,280/- ಮಂಜೂರಾತಿ ನೀಡಿದ್ದು, ಆದರೆ ಗುತ್ತಿಗೆದಾರರಾದ ಶ್ರೀ.ಕುಮಾರಸ್ವಾಮಿ ಇವರಿಗೆ ರೂ.12,955/- ದೆಕ್ ನೀಡಿದ್ದು, ಇನ್ನು ಉಳಿದಿರುವ ಮೊತ್ತವನ್ನು ಸದರಿಯವರಿಗೆ ಪಾವತಿಸಲು ಬಾಕಿ ಇರುವುದು, ದಾಖಲಾತಿಗಳು ಹಾಗೂ ಗುತ್ತಿಗೆದಾರರಾದ ಕುಮಾರಸ್ವಾಮಿ ಇವರ ಹೇಳಿಕೆಯಿಂದ ಕಂಡುಬಂದಿದ್ದು, ಸದರಿ ಕಾಮಗಾರಿಗಳನ್ನು ನಿರ್ವಹಿಸದೇ, ಬೇರೆಯವರ ಹೆಸರಿನಲ್ಲಿ ಪಂಚಾಯಿತಿ ಅಧ್ಯಕ್ಷೆಯಾದ ಕುಸುಮಾಬಾಯಿ ಮತ್ತು ಪಿ.ಡಿ.ಓ. ವಿಜಯಕುಮಾರ ಇವರು

ನಕಲಿ ದಾಖಲೆ ಸೃಷ್ಟಿ ಮಾಡಿ ಅನುದಾನದ ಹಣವನ್ನು ದುರುಪಯೋಗ ಮಾಡಿಕೊಂಡಿರುವ ಆರೋಪ ದೃಢಪಟ್ಟಿರುವುದಿಲ್ಲ.

ಆರೋಪ.3, 2012–13ನೇ ಸಾಲಿನ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ಬಿದರಹಳ್ಳಿ ಗ್ರಾಮದ ಶೇಖರಪ್ಪನ ಗದ್ದೆಯಿಂದ ಭೂತಪ್ಪನ ಕೆರೆಯವರೆಗೆ ಬಸಿಕಾಲುವೆ ಕಾಮಗಾರಿಗೆ ರೂ.1,00,000/- ಅನುದಾನ ಮೀಸಲಿಟ್ಟಿದ್ದು, ಇದನ್ನು ಸಿ.ಜಿ.ಮುರಿಗೇಸಪ್ಪ ಮತ್ತು ಇತರೆ 85 ಜನರು ಕಾಮಗಾರಿ ಪೂರ್ಣಗೊಳಿಸಿ ಕೂಲಿ ಹಣ ರೂ..92,000/- ವನ್ನು ನೀಡಲು ಫೋಟೋದೊಂದಿಗೆ ಪಂಚಾಯಿತಿಗೆ ಹಣ ಬಿಡುಗಡೆ ಮಾಡಲು ಕೋರಿಕೊಂಡಿದ್ದು, ಆದರೆ ಗ್ರಾಮಪಂಚಾಯತ್ ಅಧ್ಯಕ್ಷರು ಮತ್ತು ಪಿ.ಡಿ.ಓ, ಸೇರಿಕೊಂಡು ವಾಸ್ತವವಾಗಿ ಕಾಮಗಾರಿ ಮಾಡಿದ ಮೂಲ ಕಾರ್ಮಿಕರಿಗೆ ಹಣ ನೀಡದೆ, ಸುಳ್ಳು ದಾಖಲೆ ಸೃಷ್ಟಿಸಿ ಸಂಬಂಧಪಡದ ಬೇರೊಂದು ಕಾಮಗಾರಿಯ ಫೋಟೋಗಳನ್ನು ಹಾಜರು ಪಡಿಸಿ ಸದರಿ ಕಾಮಗಾರಿ ನಿರ್ವಹಿಸದ, ಬೇರೆ ಕೆಲಸಗಾರರ ನಕಲಿ ಪಟ್ಟಿ ಸಹಿ ಮತ್ತು ಹೆಬ್ಬೆಟ್ಟಿನ ಸಹಿ ಸೃಷ್ಟಿ ಮಾಡಿ ಹಣ ಪಡೆದುಕೊಂಡು ವಾಸ್ತವವಾಗಿ ಕಾಮಗಾರಿ ಮಾಡಿದ ಕೂಲಿ ಕಾರ್ಮಿಕರಿಗೆ ಕೂಲಿಯ ಹಣ ನೀಡದೆ ಹಣ ಮತ್ತು ಅಧಿಕಾರ ದುರ್ಬಳಕೆ ಮಾಡಿಕೊಂಡಿರುತ್ತಾರೆ ಎಂದು ಆಪಾದನೆ ಇದ್ದು, ಸದರಿ ಆಪಾದನೆಗೆ ಸಂಬಂಧಿಸಿದಂತೆ ವಿಚಾರಣಾಧಿಕಾರಿಯವರು ದಿ.2/3/17 ರಂದು ಪಿ.ಡಿ.ಓ, ಹಾಗೂ ಸ್ಥಳೀಯರೊಂದಿಗೆ ಬಸಿ ಕಾಲುವೆ ಕಾಮಗಾರಿಯನ್ನು ನಿರ್ವಹಿಸಿದ ಸ್ಥಳವಾದ ಬಿದರಹಳ್ಳಿ ಗ್ರಾಮದ ಶೇಖರಪ್ಪನ ಗದ್ದೆಯಿಂದ ಭೂತಪ್ಪನ ಕೆರೆಯವರೆಗೆ ಬಸಿಕಾಲುವೆ ಕಾಮಗಾರಿಯನ್ನು ಪರಿಶೀಲಿಸಲಾಗಿದ್ದು, ಬಸಿಕಾಲುವೆ ನಿರ್ಮಿಸಿರುವುದು ಕಂಡುಬಂದಿದ್ದು, ನಂತರ ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಪರಿಶೀಲಿಸಿ, ನಂತರ ಕಾಮಾರಿ ನಿರ್ವಹಿಸಿದ್ದ ಕೂಲಿ ಕಾರ್ಮಿಕರುಗಳ ಹೇಳಿಕೆ ಪಡೆಯಲಾಗಿದ್ದು, ಸದರಿಯವರು ಕಾಮಗಾರಿ ನಿರ್ವಹಿಸಿದ್ದ ಬಗ್ಗೆ ಹಾಗೂ ತಮಗೆ ಕೂಲಿ ಮೊತ್ತವನ್ನು ತಮ್ಮ ತಮ್ಮ ಬ್ಯಾಂಕ್ ಖಾತೆಗೆ ನೇರವಾಗಿ ಪಂಚಾಯಿತಿಯಿಂದ ಜಮೆ ಮಾಡಿರುವುದು ಕಂಡುಬಂದಿರುತ್ತೆ. ಆದ್ದರಿಂದ, ಅರ್ಜಿದಾರರು ದೂರಿನಲ್ಲಿ ಆರೋಪಿಸಿದಮತೆ ಬೇರೊಂದು ಕಾಮಗಾರಿಯ ಫೋಟೋ, ನಕಲಿಪಟ್ಟಿ ಸಹಿ ಮತ್ತು ಹೆಬ್ಬೆಟ್ಟಿನ ಸಹಿ ಸೃಷ್ಟಿ ಮಾಡಿಕೊಂಡು ಪಂಚಾಯಿತಿ ಅಧ್ಯಕ್ಷೆಯಾದ ಕುಸುಮಾಬಾಯಿ ಮತ್ತು ಪಿ.ಡಿ.ಓ, ವಿಜಯಕುಮಾರ್ ಇವರು ಹಣ ದುರುಪಯೋಗ ಮಾಡಿಕೊಂಡಿರುವ ಈ ಆರೋಪವು ಸಹ ವಿಚಾರಣಾ ಕಾಲದಲ್ಲಿ ದೃಢಪಡದೇ ಇರುವುದು ವಿಚಾರಣಾ ವರದಿಯಿಂದ ಕಂಡುಬರುತ್ತದೆ" ಎಂದು ಹೇಳಿರುತ್ತಾರೆ.

8. ತನಿಖಾ ವರದಿಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ತನಿಖೆಯ ಸಮಯದಲ್ಲಿ ದೂರುದಾರರಿಗೆ ತಿಳಿಸಿರುವುದಿಲ್ಲ. ದೂರುದಾರರು ಸದಸ್ಯರಾಗಿದ್ದಾಗ, ಕುಬೇರನಾಯ್ಕರವರ ಮನೆಯಿಂದ ಶಂಕ್ರನಾಯ್ಕ ಹಿತ್ತಲವರೆಗೆ ಮತ್ತು ಚಿನ್ನಿಕಟ್ಟೆ ಗ್ರಾಮದ ತಮಿಳುಕೇರಿಯಲ್ಲಿ ಪರ್ವತಪ್ಪನ ಮನೆಯಿಂದ ಅಂಗನವಾಡಿ ವರೆಗೆ ರಸ್ತೆ ಅಭಿವೃದ್ಧಿಗೆ

ರೂ.18,700/– ಮೀಸಲಿಟ್ಟು ಪಂಚಾಯಿತಿಯ ಪತ್ರದ ಮುಖಾಂತರ ದೂರುದಾರರ ಮೌಖಿಕ ಶಿಫಾರಸ್ಸಿನ ಮೇರೆಗೆ ಗುತ್ತಿಗೆದಾರರಾದ ಕುಮಾರಸ್ವಾಮಿಯವರು ಕಾಮಗಾರಿ ಪೂರ್ಣಗೊಳಿಸಿದರು. ಆದರೆ, ಎದುರುದಾರರು ಸದರಿ ಕಾಮಗಾರಿಯನ್ನು ಗೌಡರ ನಾಗರಾಜಪ್ಪನ ಮನೆಯಿಂದ ಅಗಸೆಬಾಗಿಲವರೆಗೂ ಕಾಮಗಾರಿ ಮಾಡಿದ್ದೇವೆಂದು ತೋರಿಸಿ ದಾಖಲೆ ಸೃಷ್ಟಿಸಿ ಹಣ ಲಪಟಾಯಿಸಿರುತ್ತಾರೆ. ಆ ಬಗ್ಗೆ ದೂರು ನೀಡಿದಾಗ, ಅಧ್ಯಕ್ಷರು ಮತ್ತು ಪಂಚಾಯಿತಿಯವರು ಹೊಸ ಕ್ರಿಯಾ ಯೋಜನೆಯನ್ನು ಮಾಡಿ ಹಣ ಬಿಡುಗಡೆ ಗೊಳಿಸಿರುತ್ತಾರೆ. ಹಳೆ ಕಾಮಗಾರಿಗೆ ಮೀಸಲಿಟ್ಟ ಹಣವನ್ನು ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ಪೊಲೀಸರು ಸೂಕ್ತ ತನಿಖೆ ನಡೆಸಿರುವುದಿಲ್ಲ. ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಎಲ್ಲಾ ಹಣ ಅಧ್ಯಕ್ಷರ ಆಪ್ತರ ಕೂಲಿ ಕಾರ್ಮಿಕರ ಹೆಸರಿಗೆ ಬಿಡುಗಡೆಯಾಗಿರುತ್ತದೆ. ಮೂಲ ಕಾರ್ಮಿಕರಿಗೆ ಹಣ ಬಿಡುಗಡೆಯಾಗಿರುವುದಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ.

9. ಆದ್ದರಿಂದ, 2011–12 ಹಾಗೂ 2012–13ನೇ ಸಾಲಿನ ಎಲ್ಲಾ ಕ್ರಿಯಾ ಯೋಜನೆಯ ಪ್ರತಿಗಳನ್ನು ಪಡೆದು ಹಾಜರು ಪಡಿಸುವಂತೆ ಹಾಗೂ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೂಲಿ ಕಾರ್ಮಿಕರಿಗೆ ಹಣ ಸಂದಾಯವಾದ ಬಗ್ಗೆ ದಾಖಲಾತಿಗಳು ಹಾಗೂ ಬ್ಯಾಂಕ್ ಸ್ಟೇಟ್‌ಮೆಂಟ್ ವಿವರಗಳನ್ನು ಪಡೆದು ಹಾಜರು ಪಡಿಸುವಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ದಾವಣಗೆರೆ ಇವರಿಗೆ ಆದೇಶಿಸಲಾಗಿತ್ತು.

10. ಪೊಲೀಸ್ ಅಧೀಕ್ಷಕರು (ಪ್ರಭಾರ), ಕರ್ನಾಟಕ ಲೋಕಾಯುಕ್ತ, ದಾವಣಗೆರೆ ಇವರು ದಾಖಲಾತಿಗಳನ್ನು ಪಡೆದು ಸಲ್ಲಿಸಿದ್ದು, ದಾಖಲಾತಿಗಳನ್ನು ಪರಿಶೀಲಿಸಿದಾಗ, ಬಿದರಹಳ್ಳಿ ಗ್ರಾಮದ ಕುಬೇರನಾಯ್ಕ ಮನೆಯಿಂದ ಶಂಕ್ರನಾಯ್ಕನ ಮನೆಯ ಹಿತ್ತಲಿನವರೆಗೆ ಕುಡಿಯುವ ನೀರಿನ ಪೈಪ್‌ಲೈನ್ ಮಾಡುವ ಕಾಮಗಾರಿಯ ಬಗ್ಗೆ ಯಾವುದೇ ಕ್ರಿಯಾ ಯೋಜನೆ ಕಂಡುಬರುತ್ತಿಲ್ಲ. ಪೊಲೀಸ್ ಅಧೀಕ್ಷಕರ ವರದಿಯಲ್ಲಿ ಸದರಿ ಕಾಮಗಾರಿಯನ್ನು ತುಂಡು ಗುತ್ತಿಗೆ ಮೇಲೆ ಕಾಮಗಾರಿ ನಿರ್ವಹಿಸಲು ರೂ.28,000/– ಕ್ಕೆ ಕ್ರಿಯಾ ಯೋಜನೆ ಆದೇಶವಾಗಿರುತ್ತದೆ ಎಂದು ಹೇಳಿದ್ದು ಆದರೆ, ಅಂತಹ ಯಾವುದೇ ಕ್ರಿಯಾ ಯೋಜನೆ ತನಿಖಾಧಿಕಾರಿ ಹಾಜರು ಪಡಿಸಿರುವ ದಾಖಲಾತಿಯಲ್ಲಿ ಕಂಡುಬರುತ್ತಿಲ್ಲ.

11. ಚಿನ್ನಿಕಟ್ಟೆ ಗ್ರಾಮಪಂಚಾಯಿತಿ 2011–12ನೇ ಸಾಲಿನ 13ನೇ ಹಣಕಾಸು ಯೋಜನೆಯಡಿಯಲ್ಲಿ ತಯಾರಿಸಿರುವ ಕ್ರಿಯಾ ಯೋಜನೆ ಪಟ್ಟಿಯಲ್ಲಿ ಕ್ಯಾತಿನಕೊಪ್ಪ ಗ್ರಾಮದ ರಸ್ತೆ ಅಭಿವೃದ್ಧಿ ಬದಲಾಗಿ ಚಿನ್ನಿಕಟ್ಟೆ ಪರ್ವತಪ್ಪನ ಮನೆಯಿಂದ ಅಂಗನವಾಡಿವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಯ ಅನುಮೋದನೆಗಾಗಿ ಕ್ರಿಯಾ ಯೋಜನೆ ಬದಲಾವಣೆಯ ಬಗ್ಗೆ ಚಿನ್ನಿಕಟ್ಟೆ ಗ್ರಾಮಪಂಚಾಯಿತಿಯವರು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಹೊನ್ನಾಳಿ ಇವರಿಗೆ ಕೋರಿರುವುದು ಕಂಡುಬರುತ್ತದೆ. ಆದರೆ, ಸದರಿ ಕ್ರಿಯಾ ಯೋಜನೆ ಬದಲಾವಣೆಯ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿಯವರು ಅನುಮೋದನೆಯನ್ನು ನೀಡಿರುವ

ಬಗ್ಗೆ ಯಾವುದೇ ದಾಖಲಾತಿ ಕಂಡುಬರುತ್ತಿಲ್ಲ. ಮೇಲಿನ ಅಂಶಗಳನ್ನು ಗಮನಿಸಿದಾಗ, ಕ್ರಿಯಾ ಯೋಜನೆ ಇಲ್ಲದೆಯೇ ಕಾಮಗಾರಿ ನಿರ್ವಹಿಸಿರುವುದು ಮತ್ತು ಕ್ರಿಯಾ ಯೋಜನೆಯನ್ನು ಬದಲಾವಣೆ ಮಾಡಿರುವುದು ಕಂಡುಬರುತ್ತಿದ್ದು, ಅದನ್ನು ಗಮನಿಸಿದಾಗ, ಎದುರುದಾರರು ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ತನಿಖಾಧಿಕಾರಿ ಹಾಜರು ಪಡಿಸಿರುವ ದಾಖಲಾತಿಗಳಲ್ಲಿ ಕೂಲಿ ಕಾರ್ಮಿಕರಿಗೆ ಒಟ್ಟು ರೂ.92,070/- ಗಳನ್ನು ಸುಮಾರು 85 ಕೂಲಿ ಕಾರ್ಮಿಕರ ಖಾತೆಗೆ ತಲಾ ರೂ.1,085/- ರಂತೆ ಜಮಾ ಮಾಡಿರುವ ಬಗ್ಗೆ ದಾಖಲಾತಿಯನ್ನು ಸಲ್ಲಿಸಿದ್ದು, ಆದರೆ ವರದಿಯಲ್ಲಿ ಹೇಳಿರುವ ಉಳಿದ 2 ಕಾಮಗಾರಿಗಳ ಬಗ್ಗೆ ಹಣವನ್ನು ಪಾವತಿಸಿರುವ ಬಗ್ಗೆ ಯಾವುದೇ ದಾಖಲಾತಿಗಳು ಕಂಡುಬರುತ್ತಿಲ್ಲ.

12. ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಹಣಕಾಸಿನ ಅವ್ಯವಹಾರ ನಡೆದಿರುವ ಬಗ್ಗೆ ಸೂಕ್ತ ವಿಚಾರಣೆ ಕೈಗೊಂಡು, ಹಣಕಾಸಿನ ಅವ್ಯವಹಾರವಾಗಿದ್ದಲ್ಲಿ ಹಣವನ್ನು ವಸೂಲಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 12/2/18

**(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)**
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ, ಬೆಂಗಳೂರು.**